ನಿಯಮ ೩೩೪ರ ಮೇರೆಗೆ

(i) ಪುತ್ತೂರಿನಲ್ಲಿ ಆಗಸ್ಟೀನ್ ಎಂಬ ತರುಣನ ಕೊಲೆ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕಿನ ಕುಟುಪಾಡಿ ಗ್ರಾಮದ ಆಗಸ್ಟೀನ್ ಎಂಬ ೨೪ ವರ್ಷದ ತರುಣ ಈ ತಿಂಗಳ ೫ನೇ ತಾರೀಖು ಮನೆಯಿಂದ ಕಾಣೆಯಾಗಿದ್ದಾನೆ ಕಾಣೆಯಾದ ಹಲವಾರು ದಿವಸಗಳ ನಂತರ ಅಂದರೆ ೮ನೇ ತಾರೀಖು ಒಂದು ಗೋಣಿ ಚೀಲದಲ್ಲಿ ಈತನ ಬಾಡಿಯನ್ನು ಹಾಕಿ, ನದಿಯಲ್ಲಿ ಯಾರೋ ಹಾಕಿರುವುದು ಕಂಡುಬಂತು. ಈ ಚೀಲದ ಹೊರಗೆ ಶವದ ಕಾಲನ್ನು ಕಂಡ ಜನರು ನದಿಯಿಂದ ಆ ಗೋಣಿ ಚೀಲವನ್ನು ಹೊರಗೆ ತೆಗೆದುಹಾಕಿದ್ದಾರೆ. ಈ ಬಗ್ಗೆ ಅಲ್ಲಿನ ಪೋಲೀಸರು ಸರಿಯಾದ ತನಿಖೆ ಮಾಡಿದ್ದರೆ ನಾನು ಇಲ್ಲಿ ಈ ಪ್ರಶ್ನೆಯನ್ನು ಎತ್ತುತ್ತಿರಲಿಲ್ಲ. ಅಲ್ಲಿನ ಪೋಲೀಸರು ಸಂಪೂರ್ಣವಾಗಿ ನಿಷ್ಕ್ರಿಯರಾದ ಕಾರಣ ನಾನು ಈ ಪ್ರಶ್ನೆಯನ್ನು ಎತ್ತಬೇಕಾಗಿದೆ. ಈ ತರುಣನ ತಾಯಿ ಇಲ್ಲಿಗೆ ಬಂದು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಈ ತರುಣನ ಕೆಲವು ಸಂಬಂಧಿಗಳಿಗೆ ಈ ವಿಚಾರ ಗೊತ್ತಿದ್ದರೂ ಕೂಡ, ಪೋಲೀಸರು ಆಸಕ್ತಿ ವಹಿಸಿ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅಂದರೆ ಅವರು ಈ ಕೇಸನ್ನು ಕೈಬಿಟ್ಟಂತೆ ಕಾಣಿಸುತ್ತಿದೆ. ಈ ಒಂದು ಭೀಕರವಾದಂತ ಮರಣ ಯಾವ ರೀತಿ ಆಯಿತು ಎಂಬುದು ಇಡೀ ಲೋಕಕ್ಕೇ ಗೊತ್ತಾಗಿದ್ದರೂ ಸಹ ಅಲ್ಲಿನ ಪೋಲೀಸರು ತನಿಖೆ ಮಾಡದೆ ಸಂಪೂರ್ಣ ನಿಷ್ಕ್ರಿಯರಾಗಿರುವುದಕ್ಕೆ ಕಾರಣವೇನು ? ಈ ಬಗ್ಗೆ ಕೂಡಲೇ ಸರ್ಕಾರದವರು ತನಿಖೆ ಮಾಡಬೇಕೆಂದು ಆಗ್ರಹಪಡಿಸಲು ಈ ಪ್ರಶ್ನೆಯನ್ನು ಎತ್ತಿದ್ದೇನೆ.

ಶ್ರೀ ರಮೇಶ ಜಿಗಜಿಣಗಿ.—ಈ ವಿಷಯದ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾಳೆ ಅಥವಾ ನಾಡಿದ್ದರಲ್ಲಿ ಈ ಬಗ್ಗೆ ನಾನು ಇಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಬಗ್ಗೆ ಸ್ಥಳೀಯ ಪೋಲೀಸರಿಂದ ನಮಗೆ ನ್ಯಾಯ ಸಿಗುವುದಿಲ್ಲ. ಏಕೆಂದರೆ, ಅವರು ಈ ಬಗ್ಗೆ ಸಂಪೂರ್ಣ ನಿಷ್ಕ್ರಿಯರಾಗಿದ್ದಾರೆ. ಈ ಪ್ರಕರಣವನ್ನು ಸಿ.ಒ.ಡಿ.ಗೆ ಒಪ್ಪಿಸಿದರೆ ಅವರು ಅಲ್ಲಿ ಹೋಗಿ ತನಿಖೆ ಮಾಡುತ್ತಾರೆಂದು ನಾನು ಸೂಚನೆ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಆಗಬಹುದು. ಇದನ್ನು ಸಿ.ಒ.ಡಿ. ಯಿಂದ ತನಿಖೆ ಮಾಡಿಸುತ್ತೇನೆ.

(ii) ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಒಡೆಯರ್ ಮೇಲಿರುವ ಗಡಿಪಾರು ಆಜ್ಞೆ ಬಗ್ಗೆ

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗದಲ್ಲಿರುವ ಶ್ರೀ ಮುರುಘರಾಜೇಂದ್ರ ಒಡೆಯರ್ ಅವರು ವಿದ್ಯಾರ್ಥಿಗಳ ನಾಯಕರು ಹಾಗೂ ಜನತಾ ಪಕ್ಷದ ನಾಯಕರೂ ಆಗಿದ್ದಾರೆ. ಇವರು ಯುವಕರ ಸಂಘಟನೆ ಮಾಡಲು ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಈ ಯುವಕ ಮುಂದಾಳು ಕಾನೂನು ಪದವಿ ಪಡೆಯಲು ಇನ್ನೂ ಓದುತ್ತಿದ್ದಾರೆ. ಈ ಹಿಂದಿನ ಸರ್ಕಾರ ಈ ತರುಣನ ಮೇಲೆ ಗಡಿಪಾರು ಆಜ್ಞೆ ಹೊರಡಿಸಿರುವುದು ಈಗಿನ ಸರ್ಕಾರಕ್ಕೂ ಗೊತ್ತಿದೆ.

ಅಧ್ಯಕ್ಷರು.—ತಾವು ಹೆಚ್ಚಿನ ವಿವರಗಳಿಗೆ ಹೋಗಬೇಡಿ.

ಮಾನ್ಯ ಅಧ್ಯಕ್ಷರೇ, ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರು ಯುವ ಜನತೆಯನ್ನು ಸಂಘರ್ಷ ಮಾಡಿದ್ದಾರೆ. ಅವರು ಜನತೆಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇದರ ಪ್ರತಿಫಲವಾಗಿ ಹಿಂದಿನ ಸರ್ಕಾರದವರು ಅವರ ಮೇಲೆ ಗಡಿಪಾರು ಆಜ್ಞೆಯನ್ನು ಜಾರಿ ಮಾಡಿದ್ದಾರೆ. ಆದ್ದರಿಂದ ತಮ್ಮ ಜನತಾ ಸರ್ಕಾರ ಆ ಗಡಿಪಾರು ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ಶಿವಮೂರ್ತಿಯವರು ತಾವು ಮಾತನಾಡಬಹುದು.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಶ್ರೀ ಮುರುಘರಾಜೇಂದ್ರರವರು ಜನತಾ ಪಕ್ಷದ ಕಾರ್ಯಕರ್ತರು. ಅವರ ಮೇಲೆ ೧೯೭೨ನೇ ಇಸವಿಯಲ್ಲಿ ಗಡಿಪಾರು ಆಜ್ಞೆಯನ್ನು ಜಾರಿ ಮಾಡಿದ್ದಾರೆ. ಅವರು ವಿದ್ಯಾರ್ಥಿಗಳ ಸಂಘಟನೆಯನ್ನು ಮಾಡಿದ್ದಾರೆ. ಅವರು ಪ್ರಾರಂಭ ದಿಂದಲೂ ಕೂಡ ಒಳ್ಳೆಯ ಕೆಲಸಕಾರ್ಯಗಳನ್ನೂ ಮಾಡಿಕೊಂಡು ಬಂದಿದ್ದಾರೆ. ಆದರೆ ಅವರ ವಿರುದ್ಧ ಇವತ್ತು ಗಡಿಪಾರು ಆಜ್ಞೆಯನ್ನು ಜಾರಿ ಮಾಡಿದ್ದಾರೆ. ಅವರು ರೈತರ ಮತ್ತು ಕಾರ್ಮಿಕರ ಸಂಘಟನೆ ಮಾಡಿದ್ದಾರೆ. ಆದರೆ ಈ ಗಡಿಪಾರು ಆಜ್ಞೆಯನ್ನು ಜಾರಿ ಮಾಡಿದಂಥ ಕಾಲ ದಲ್ಲಿ ಈಗಿನ ಮಂತ್ರಿಗಳಾದಂಥ ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರು ದೊಡ್ಡಬಳ್ಳಾ ಪುರದ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದ್ದಾರೆ. ಅವರ ಮೇಲೆ ಜಾರಿ ಮಾಡಿರುವ ಗಡಿಪಾರು ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ನಾನು ವಿಧಾನ ಸೌಧದ ಮುಂದೆ ಧರಣಿ ಸತ್ಯಾಗ್ರಹವನ್ನು ಮಾಡುತ್ತೇನೆ ಎಂದು. ಆಗ ಮಾನ್ಯ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಸಹ ಇದ್ದರು. ಆದರೆ ಅವರದೇ ಸರ್ಕಾರ ಅಧಿಕಾರಕ್ಕೆ ಬಂದ ನಂತರ ವಾದರೂ ಅವರನ್ನು ಏತಕ್ಕೆ ಬಿಡುಗಡೆ ಮಾಡಿ ಆ ಗಡಿ ಪಾರು ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳ ಬಾರದೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ ಶ್ರೀಮಾನ್ ಮುರುಘರಾಜೇಂದ್ರ ಎಂಬುವರ ಮೇಲೆ ಗಡಿಪಾರು ಆಜ್ಞೆ ಇನ್ನೂ ಜಾರಿಗೆ ಬಂದಿಲ್ಲ. ೧೯೭೨ನೇ ಇಸವಿ ಏಪ್ರಿಲ್‌ನಲ್ಲಿ ಕೋಮುವಾರು ಗಲಭೆ ಉಂಟಾಗಿ ಆ ಸಂದರ್ಭದಲ್ಲಿ ಶ್ರೀಮಾನ್ ಸದಾನಂದ, ಶ್ರೀ ಶೇಕ್ ಮಹಮದ್ ಹಾಗೂ ಇಸ್ಮಾಯಿಲ್ ಎಂಬುವವರ ಮೇಲೆ ಗಡಿಪಾರು ಆಜ್ಞೆಯನ್ನು ಹೊರಡಿಸಬೇಕೆಂದು ಒಂದು ಪ್ರಕರಣ ಶುರು ವಾಯಿತು. ಆದರೆ ಈ ಬಗ್ಗೆ ದಿನಾಂಕ ೩೦-೧೦-೧೯೮೪ರಂದು ಕೋರ್ಟಿನಲ್ಲಿ ಆರ್ಗ್ಯೂಮೆಂಟ್ ನಡೆಯ ಬೇಕಾಗಿರುವುದರಿಂದ ಆ ಗಡಿ ಪಾರು ಆಜ್ಞೆಯನ್ನು ಇನ್ನೂ ಜಾರಿ ಮಾಡಿಲ್ಲ.

ಶ್ರೀ ಪಂಪಾಪತಿ.—ಸ್ವಾಮಿ ಆ ಕೇಸ್‌ನ್ನು ವಾಪಸ್ಸು ತೆಗೆದುಕೊಳ್ಳಬಹುದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ, ಆರ್ಗ್ಯೂಮೆಂಟ್ ನಡೆಯುತ್ತಿರುವಂಥ ಸಂದರ್ಭದಲ್ಲಿ ಕೇಸನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆ ಪ್ರಶ್ನೆಯೇ ಈ ಸಂದರ್ಭದಲ್ಲಿ ಉದ್ಭವಿಸುವುದಿಲ್ಲ.

ಅಧ್ಯಕ್ಷರು.—ಶ್ರೀ ಗೋಪಾಲ ಮುಕುಂದ ಕಾನಡೆಯವರು ತಾವು ತಮ್ಮ ವಿಷಯವನ್ನು ಪ್ರಸ್ತಾಪ ಮಾಡಬಹುದು.

(iii) ಸಾಬೂನು ಕಾರ್ಖಾನೆಯಲ್ಲಿ ಹರಿಜನ/ಗಿರಿಜನ ಕೆಲಸಗಾರರನ್ನು ತೆಗೆದ ಬಗ್ಗೆ

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ ಬೆಂಗಳೂರು ಸೋಪ್ ಫ್ಯಾಕ್ಟರಿಯಲ್ಲಿ ೫೫ ಜನ ಹರಿಜನ ಮತ್ತು ಗಿರಿಜನರಿಗೆ ಬಹಳ ಅನ್ಯಾಯವಾಗಿದೆ ಅದು ಏನೆಂದರೆ ಅಲ್ಲಿ ಕೆಲಸ ಮಾಡುವಂಥ ೫೫ ಜನ ಹರಿಜನ ಮತ್ತು ಗಿರಿಜನರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿದ್ದಾರೆ. ಆದರೂ ಸರ್ಕಾರದ ಗಮನಕ್ಕೆ ಇದುವರೆಗೂ ಬಂದಿಲ್ಲ. ಅದೂ ಹರಿಜನ ಮತ್ತು ಗಿರಿಜನರ ಕಲ್ಯಾಣ ಸಮಿತಿಯು ಈ ಮೈಲ್ಯಂಡ ಸೋಪ್ ಫ್ಯಾಕ್ಟರಿಗೆ ವಿಜಿಟ್ ಕೊಟ್ಟು ಬಂದ ಮಾರನೇ ದಿವಸವೇ ಆ ಹರಿಜನ ಮತ್ತು ಗಿರಿಜನ ಕೆಲಸಗಾರರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿದ್ದಾರೆ, ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಈಗತಾನೆ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೀರಿ. ಅವರು ಸಂಬಂಧಪಟ್ಟ ಇಲಾಖೆಯ ಪತಿಯಿಂದ ಉತ್ತರ ತರಿಸಿ ಒಂದು ಹೇಳಿಕೆಯನ್ನು ಮಾಡುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ ಯಾವಾಗ ಹೇಳಿಕೆ ಮಾಡುತ್ತಾರೆಂದು ನಮಗೆ ಒಂದು ಟೈಮ್ ಕೊಟ್ಟರೆ ಒಳ್ಳೆಯದು.